## ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ.

**ಸಿ.ಸಿ. ನಂ.79/2019**

ಫಿರ್ಯಾದುದಾರರು : ಆರಕ್ಷಕ ಉಪ ನಿರೀಕ್ಷಕರು,
ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು : 1. ಪ್ರಸನ್ನ ಎಂ.ಎಸ್ ಬಿನ್ ಶಿವರಾಮೇಗೌಡ,
30 ವರ್ಷ, ವ್ಯವಸಾಯ,
2. ಶಿವರಾಮೇಗೌಡ ಬಿನ್ ಲೇಟ್ ಚನ್ನೇಗೌಡ,
55 ವರ್ಷ, ವ್ಯವಸಾಯ,
ಇಬ್ಬರೂ ವಾಸಃ ಮಾಚಹೊಳಲು ಗ್ರಾಮ,
ಕೆ.ಆರ್.ಪೇಟೆ ತಾಲ್ಲೂಕು.

### :: ದೋಷಾರೋಪಣೆ ::-

ಶ್ರೀ ಶಮೀರ್ ಪಿ. ನಂದ್ಯಾಲ್, ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೃಷ್ಣರಾಜಪೇಟೆ ಆದ ನಾನು ಮೇಲೆ ಹೇಳಿದ ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸಿರುತ್ತೇನೆ.

ದಿನಾಂಕ 22.05.2018 ರಂದು ಮದ್ಯಾಹ್ನ 12-30 ಗಂಟೆ ಸಮಯದಲ್ಲಿ ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಾದ ಮಾಚಹೊಳಲು ಗ್ರಾಮದ ಸರ್ವೆ ನಂ.74/13 ರಲ್ಲಿನ ಜಮೀನಿನಲ್ಲಿ ಆರೋಪಿತರು ಪಿರ್ಯಾದಿ ಗೋಪಾಲಕೃಷ್ಣ ರವರ ಬಾಬ್ತು ಜಮೀನಿನಲ್ಲಿ ಸೈಜು ಕಲ್ಲುಗಳನ್ನು ಹಾಕಿಕೊಂಡಿದ್ದು ಪಿರ್ಯಾದಿ ರವರು 1 ನೇ ಆರೋಪಿಗೆ ಈ ಜಮೀನು ನನ್ನದು ಹಾಕಿರುವ ಸೈಜು ಕಲ್ಲುಗಳನ್ನು ತೆಗೆದುಕೊ ಎಂದು ಹೇಳಿದಾಗ 1 ನೇ ಆರೋಪಿಯು ಈ ಜಾಗ ಗ್ರಾಮಠಾಣದ್ದು ಎಂದು ಹೇಳುತ್ತಾ 1 ಮತ್ತು 1 ನೇ ಆರೋಪಿತರಾದ ನೀವು ನಿಮ್ಮಗಳ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳಲು ಪಿರ್ಯಾದಿ ಗೋಪಾಲಕೃಷ್ಣ ರವರನ್ನು ಮುಂದಕ್ಕೆ ಹೋಗದಂತೆ 2 ನೇ ಆರೋಪಿಯು ತಬ್ಬಿಹಿಡಿದುಕೊಂಡು ಅಕ್ರಮ ತಡೆಯನ್ನುಂಟು ಮಾಡಿ, ಭಾ.ದಂ.ಸಂ ಕಲಂ 341 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

2. ಎರಡನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಸಮಾನ ಉದ್ದೇಶವನ್ನು ಈಡೇರಿಸಿಕೊಳ್ಳಲು, ನಿಮ್ಮಲ್ಲಿ 1 ನೇ ಆರೋಪಿಯು ಕೈಗಳಿಂದ ಪಿರ್ಯಾದಿ ಗೋಪಾಲಕೃಷ್ಣ ರವರ ಮೈಮೇಲೆ ಹೊಡೆದು ನೋವುಂಟುಮಾಡಿ, ಕೆಳಗೆ ತಳ್ಳಿ ಬೀಳಿಸಿ ಕಾಲಿನಿಂದ ಒದ್ದು ನೋವುಂಟು ಮಾಡಿ, ಭಾ.ದಂ.ಸಂ ಕಲಂ 323 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

3. ಮೂರನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವುಗಳು ನಿಮ್ಮ ಸಮಾನ ಉದ್ದೇಶನ್ನು ಈಡೇರಿಸಿಕೊಳ್ಳಲು ಪಿರ್ಯಾದಿ ಗೋಪಾಲಕೃಷ್ಣ ರವರನ್ನು ಉದ್ದೇಶಿಸಿ ನೀನು ಮತ್ತೆ ಈ ಜಮೀನಿನ ಬಳಿ ಬಂದು ಕಲ್ಲುಗಳನ್ನು ಎತ್ತಿಕೊ ಎಂದು ಹೇಳಿದರೆ ಇಲ್ಲಿರುವ ಸೈಜು ಕಲ್ಲುಗಳನ್ನು ನಿನ್ನ ತಲೆಯ ಮೇಲೆ ಎತ್ತು ಹಾಕಿ ಸಾಯಿಸಿ ಇಲ್ಲೆ ಸಮಾದಿಮಾಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿ ಪ್ರಾಣಭಯವನ್ನುಂಟು ಮಾಡಿ, ಭಾ.ದಂ.ಸಂ ಕಲಂ 506 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

ಮೇಲ್ಕಾಣಿಸಿದ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ-1ಃ ಮೇಲೆ ಹೇಳಿದ ಅಂಶಗಳು ನಿಮಗೆ ಅರ್ಥವಾಗಿದೆಯೇ?

ಉಃ

ಪ್ರ-2ಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉಃ

ಮೇಲ್ಕಂಡ ವಿಷಯವನ್ನು ಆರೋಪಿತರಿಗೆ ಓದಿ ಹೇಳಿ ಸರಿಯೆಂದು ಒಪ್ಪಿದ್ದು ಅದರಂತೆ ಹೇಳಿಕೆ ಮಾಡಿಕೊಂಡಿದ್ದೇನೆ.

ದಿ: 20.12.2022.
ಕೆ.ಆರ್.ಪೇಟೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕೃಷ್ಣರಾಜಪೇಟೆ.